


ವೈದ್ಯರು ಮೊದಲು ಮುಗುಳ್ನಕ್ಕರು. ಕ್ರಾಪು ಸರಿಮಾಡಿಕೊಂಡರು. ಗಂಟಲು ಸರಿಮಾಡಿಕೊಂಡು ತೀರ್ಪಿತ್ತರು.

"ನೋಡೀಮ್ಮಾ, ಆತಂಕಕ್ಕೇನೂ ಕಾರಣವಿಲ್ಲಾ. ಇದು ಎಲ್ಲರಿಗೂ ವಯಸ್ಸಾದಮೇಲೆ ಸಾಮಾನ್ಯವಾಗಿ ಬರುವಂಥದ್ದು. ಈಗ ಕಪ್ಪು ಕೂದಲು ಬಿಳಿಪಾಗುವುದಿಲ್ಲವೇ? ಇದೂ ಹಾಗೆಯೇ."

"ಡಾಕ್ಟ್ರೇ, ಆದರೆ ನನಗಿನ್ನೂ ವಯಸ್ಸಾಗಿಲ್ಲ. ಇಲ್ನೋಡಿ, ನನ್ನ ಕೂದಲಿನ್ನೂ ಕಪ್ಪಾಗಿಯೇ ಇದೆ" ಎಂದು ಡೈನಿಂದಾಗಿ ದಟ್ಟ ಕಪ್ಪಾಗಿದ್ದ ಕೂದಲನ್ನು ನಾನೂ ಸರಿಮಾಡಿಕೊಂಡೆ.

"ಛೆ... ಛೆ... ನಾನು ಹಾಗೆಂದೆನೇ? ಉದಾಹರಣೆ ಕೊಟ್ಟೆ ಅಷ್ಟೆ. ನಿಮಗೆ ಮಂದವಾಗಿರುತ್ತಿರುವ ದೃಷ್ಟಿಗೆ ಕಾರಣ ಕಣ್ಣಿನಲ್ಲಿ ಬೆಳೆಯುತ್ತಿರುವ ಪೊರೆ."

'ಪೊರೆ' ಎಂದೊಡನೆ ನನ್ನ ಮನಸ್ಸು ದಶಕಗಳ ಹಿಂದಿನ ನೆನಪನ್ನು ಮೆಲುಕು ಹಾಕಿತು.